ಮುಂದಿನ ಮಣ್ಣೇತ್ತಿನ ಅಮಾಸಿಗಂದ್ರ ಪಾರಮ್ಮ್ರನ ಗಂಡ ಫಕ್ಕೀರಪ್ಪ ಹೊಲದಾಗ ಎತ್ತು ಇರಿದು ಸತ್ತ. ಆಗಿನ್ನೂ ಮಂಟವ್ವ ಬದಕಿದ್ಲು. ಅಕೀ ಅತ್ತೀ, ಮೈದುನ್ರು ಎಲ್ಲಾರೂ ಒಳಗೊಳಗ ಮಾತಾಡ್ಕೊಂಡು ಅಕೀ ಈ ಮನ್ಯಾಗ ಇರೂದ ಬ್ಯಾಡಂತ ನಿರ್ಧಾರಕ ಬಂದು ತಮ್ಮ್ರದs ಒಕ್ಕಲಿನ ಊರ ಹೊರಗಿನ ದ್ಯಾಮವ್ವನ ಗುಡಿ ಹಂತೇಕಿನ ಮನ್ಯಾಗ ಒಂದಿಷ್ಟು ಭಾಂಡೆ... ಕೊಡಪಾನ... ಬಕೀಟು ಕೊಟ್ಟ ಅಟ್ಟಿದ್ರು.

ಅಕೀ ಗಂಡನ ಹೆಣಾನೂ ಮುಟ್ಟಾಕ ಬಿಡ್ಲಿಲ್ಲ ಮಂಟವ್ವ. ಖರೇನ ಎತ್ತಿನ ಕೊಂಬ ಇರ್ದ ಸತ್ನೋ ಇಲ್ಲೋ ದೇವ್ರ ಬಲ್ಲ. ಅವತ್ತ ಕತ್ಲ ಕೊಣ್ಯಾಗ ಪಾರವ್ವನ ಕೈದಿ ಹಂಗ್ ಇಟ್‌ಮ್ಯಾಲ ಅಕೀಗೆ ಗಂಡನ ಮಕಾನ ನೋಡ್ಲಿಲ್ಲ. ಅಂವಾ ಹೊಲದಾಗನ ಯಾವಾಕಿನ್ನೋ ಇಟ್ಕೊಂಡಾನ ಅಂತಿದ್ರು ಮಂದಿ.

ಫಕೀರಪ್ಪನ ಹೆಣಾ ಮನ್ಯಾಗ ಬಂದಾಗ ಸೆಗಣಿ ಗಂಜಲಾ ಬಳ್ಯಾಕ ಹತ್ತಿದ್ಲು ಪಾರವ್ವ. ಮಂಟವ್ವ ಲಬಲಬ ಹೊಯ್ಕೊಂಡು ಅಳುವ, ಚೀರುವ ದನಿಕೇಳಿ ಸಗಣಿಕೈಯನ್ನು ತೊಳೆದುಕೊಳ್ಳದೇ ಓಡಿ ಬಂದಿದ್ದಳು ಹೊರಗ.

ಆಜೂ ಬಾಜೂ ಹೊಲದಾವರು ಅವನ್ನ ಹೆಣಾ ಚಕ್ಕಡ್ಯಾಗ ಹೊತ್ಕೊಂದ ಬಂದಿದ್ರು. ಪಾರವ್ವನ ಕಾಲ ಅಲ್ಲೇ ನೆಲದಾಗ ಹೂತ ಹ್ವಾದ್ವು. ಇನ್ನೇನು ಮುಂದ ಓಡಿ ಗಂಡನ್ ಹೆಣಾನ ಅಪ್ಕೋಬೇಕು ಅಷ್ಟರಾಗ,

**ಪಾರವ್ವಗ ಗಂಡನ ಮಕಾ ಸತೆ ನೋಡಾಕ ಬಿಡಲಿಲ್ಲಾ. ಸಾಯೂಕ ಏನಾಗಿತ್ತು? ಚೊಲೋನ ಇದ್ನಲ್ಲ ಅಂತಾ ಪಾರವ್ವ ನೆಪ್ಪ ಮಾಡ್ಕೋಳಾಕ ಹತ್ತಿದ್ಲು. ಯಾಂವಾಕಿನೋ ಇಟಗೊಂಡಿದಾನಾ ಅಂತಾ ಮಂದಿ ಅಂದ್ರೂ ಪಾರವ್ವಗ ಕೆಟ್ಟ ಅನಿಸಿರ್ಲಿಲ್ಲ. ಆದ್ರ ಸಾಯೂದ್ರೊಳಗ ಒಮ್ಮೆ್ರ ಗಂಡಗ್ ಖರೇ ಹೇಳ್ಬೇಕು... ಅಂತಾದ್ದೇನೂ ಆಗಿಲ್ಲ... ನಂಬ್ರೀ ಆಂತಾ ಅಂದ್ಕೊಂಡಿದ್ದು ಮಾತ್ರ ಹೊಟ್ಟ್ಯಾಗ ಉಳ್ಕೊಂತು...**

"ಏಯ್ ಹಲ್ಕಟ್ ರಂಡಿ... ನೀ ನನ್ ಮಗನ್ ಮೈ ಮುಟ್ಟಬ್ಯಾಡಾ... ಅವನ ಹೆಣಕ್ಕೂ ನಿನ್ನ ನೆಳ್ಳು ಬೀಳೂದ್ ಬ್ಯಾಡಾ" ಅಂತಾ ಭೋರಿಟ್ಟು ಅಳಾಕ ಹತ್ತಿದ್ದು ನೋಡಿ ಮೈದ್ನಾ ಅನ್ನೋ ಭಾಡ್ಯಾ ಅಕೀನ ಕಾಲೀಲೆ ಒದ್ಕೋಂತ ಹೋಗಿ ಹಿತ್ಲಾಗಿನ ಕತ್ಲ ಕೊಣ್ಯಾಗ ನೂಕಿ ಬಾಗ್ಲಾ ಹಾಕಿದಾ.

ಫಕೀರಪ್ಪನ ಹೆಣಾ ಹೋಗೂಮಟಾನೂ ಪಾರವ್ವ ಒಬ್ಬಕೀನ ಅತ್ಲು. ಕರದ್ಲು. ಎದೆಗೂಡನ್ನೂದು ಒಡದು ರಕ್ತಾ ಹರಿಯೂ ಹಂಗ ಉಳ್ಯಾಡಿ ಅತ್ಲು. ಹಿಂಗ ಬದ್ಕೂ ಬದ್ಲು ತಾನ ಇಸಾನರ ಕುಡ್ದು ಸಾಯಬಾರದ ಅಂತ ದುಖ್ಖಿಸಿ ದುಖ್ಖಿಸಿ ಅತ್ಲು. ಮಕ್ಕಳ ನೆನಪಾಗಿ ಮತ್ತಷ್ಟು ಅತ್ತಳು. ಅವು ಹುಬ್ಬಳ್ಳಿ ಅತ್ತೀ ಮನ್ಯಾಗ ಇದ್ವು.

ಹೆಣಾ ನೋಡಾಕ್ ಬಂದ ನೂರ ಮಂದೀ ನೂರು ಮಾತು ಆಡಿದ್ರು. ಹೊಟ್ಯಾಗ ಇರ್ದಿದ್ದು ಕೊಂಬಲ್ಲ ಅಂತಾ ಒಬ್ಬರಂದ್ರ ಅದು ದೊಡ್ಡ ಕುಡಗೋಲಿಂದss ಹೊಡತ ಅಂತಾ ಇನ್ನೊಬ್ರು